



ಚಿತ್ರ: ಬಿ.ಎಚ್.ಶಿವಕುಮಾರ್

ಹಿಂದಿನಂತೆ ನಿಮ್ಮ ಸರ್ವಾಧಿಕಾರವನ್ನು ಸ್ಥಾಪಿಸುವ ಪ್ರಯತ್ನ ನಿರರ್ಥಕವಾಗುತ್ತದೆ.

### ನಿಗಾ ವಹಿಸಿ

ಆಪ್ತಸಲಹೆಗೆ ಬಂದಿದ್ದ ಹದಿನೈದರ ಕಿಶೋರಿಯನ್ನು ಅವರ ತಾಯಿಯ ಮುಂದೆ ಕೇಳಿದೆ– ನೀನು ಅಮ್ಮನಿಗೆ ಅಡುಗೆ ಕೆಲಸಕ್ಕೆ ಸಹಾಯ ಮಾಡುತ್ತೀಯಾ? ಎಂದು. 'ಅವರು ಕರೆದಾಗ ಮಾತ್ರ ಹೋಗುತ್ತೇನೆ' ಎಂದು ಅವಳು ಉತ್ತರಿಸಿದಳು. 'ಸಮಯವಿದ್ದಾಗ ನೀನಾಗಿಯೇ ಹೋದರೆ ಅಮ್ಮನಿಗೆ ಇನ್ನೂ ಹೆಚ್ಚು ಖುಷಿಯಾಗಬಹುದಲ್ವಾ?' ಎನ್ನುವ ನನ್ನ ಪ್ರಶ್ನೆಗೆ ಅವಳ ಉತ್ತರ ನಾನು ನಿರೀಕ್ಷಿಸಿದಂತೆಯೇ ಇತ್ತು. 'ಅಮ್ಮನನ್ನು ಮಾತನಾಡಿಸಲು ಹೋದ ಕೂಡಲೆ ಅವಳು ಓದು, ಹೋಂವರ್ಕ್, ಮಾರ್ಕ್ಸ್‌ಗಳ ಬಗೆಗೆ ಮಾತ್ರ ಮಾತನಾಡುತ್ತಾರೆ, ಅದರಿಂದ ನನಗೆ ಬೇಸರವಾಗುತ್ತದೆ' ಎನ್ನುವುದು ಅವಳ ಉತ್ತರವಾಗಿತ್ತು!

ಒಪ್ಪಂದದ ನಿಯಮಗಳನ್ನು ಮಕ್ಕಳು ಪಾಲಿಸುತ್ತಿರುವ ಬಗೆಗೆ ಚರ್ಚೆ ಮಾಡಲು ಮತ್ತು ಮಕ್ಕಳಿಗೆ ಅಗತ್ಯವಿರುವ ಸಹಾಯ ನೀಡಲು ದಿನದಲ್ಲಿ, ಎರಡು ಮೂರು ದಿನಕ್ಕೊಮ್ಮೆ ಅಥವಾ ವಾರಕ್ಕೊಮ್ಮೆ ಒಂದು ಸಮಯ ನಿಗದಿಪಡಿಸಿಕೊಳ್ಳಿ. ಆಗ ಮಾತ್ರ ಶಾಲಾಭ್ಯಾಸದ ವಿಷಯಗಳನ್ನ ಚರ್ಚೆ ಮಾಡಿ. ಉಳಿದ ಸಮಯದಲ್ಲಿ ಮಕ್ಕಳ ಜೊತೆ ಆಟವಾಡುತ್ತಾ ಖುಷಿಯಾಗಿ ಕಳೆದರೆ ನಿಮ್ಮ ಮೇಲೆ ಮಕ್ಕಳಿಗೆ ಗೌರವ, ಪ್ರೀತಿ ಹೆಚ್ಚುತ್ತದೆ. ಬದಲಾಗಿ ಮಕ್ಕಳು ಕಂಡ ಕೂಡಲೆ ನಿಮ್ಮ ತಗಾದೆಗಳನ್ನು ಶುರು ಮಾಡಿದರೆ ಅವರು ನಿಮ್ಮಿಂದ ಮಾನಸಿಕವಾಗಿ ದೂರ ಹೋಗುವ ಪ್ರಯತ್ನದಲ್ಲಿರುತ್ತಾರೆ. ಹೀಗಾದಾಗ ಪೋಷಕರ ಮತ್ತು ಮಕ್ಕಳ ಮಧ್ಯೆ ಗೊತ್ತೇ ಆಗದಂತೆ ಕಂದಕವೊಂದು ಸೃಷ್ಟಿಯಾಗುತ್ತದೆ.

ಆರಂಭದ ಹಂತದಲ್ಲಿ ಮಕ್ಕಳು ತಪ್ಪು ಮಾಡುವುದು ಸಹಜ. ಇದಕ್ಕೆ ಪರಿಹಾರ ಹಳೆಯ ದಾರಿಗೆ ಮತ್ತೆ ಮರಳುವುದಲ್ಲ. ಮಕ್ಕಳನ್ನು ದೂಷಿಸದೆ ಅವರ ಜವಾಬ್ದಾರಿಗಳ ಬಗೆಗೆ ನಯವಾಗಿ ಎಚ್ಚರಿಸಿ. ಅವರು ನಿಯಮಗಳನ್ನು ಪಾಲಿಸಿದರೆ ನಿಮಗೆ ಹೆಚ್ಚು ಸಂತೋಷವಾಗುತ್ತದೆ ಮತ್ತು ನಿಮ್ಮಿಂದ ಹೆಚ್ಚು ಸಹಕಾರವನ್ನು ನಿರೀಕ್ಷಿಸಬಹುದು ಎಂದೂ ತಿಳಿಸಬಹುದು. ಆದರೆ ನಿಯಮ ಪಾಲನೆಗೆ ಮತ್ತು ನಿಮ್ಮ ಪ್ರೀತಿಯ ಅಭಿವ್ಯಕ್ತಿಗೆ ಸಂಬಂಧ ಕಲ್ಪಿಸುತ್ತಾ ಹೋದರೆ ಮಕ್ಕಳು ಮಾನಸಿಕವಾಗಿ ದೂರವಾಗುತ್ತಾರೆ. ಮಕ್ಕಳು ಗಳಿಸಬಹುದಾದ ಅಂಕಗಳು, ಪ್ರಶಸ್ತಿಗಳ ಹೊರತಾಗಿಯೂ ಅವರ ಬಗೆಗೆ ನಿಮ್ಮ ಪ್ರೀತಿ, ಬೆಂಬಲ, ಸಹಕಾರ ಸದಾ ಇರುತ್ತದೆ ಎನ್ನುವ ಭರವಸೆ ನೀಡಿ.

ಅವರ ತಪ್ಪುಗಳಿಗೆ ಪ್ರತಿಯಾಗಿ ನಾವು ಸಿಟ್ಟು ಮಾಡುವುದು, ದೂಷಣೆ ಮಾಡುವುದು, ಹೊಡೆದು, ಬಯ್ದು ಅಥವಾ ಮಾತನಾಡದೆ ಶಿಕ್ಷಿಸುವುದು– ಮುಂತಾದ ವರ್ತನೆಗಳನ್ನು